ಅಕಸ್ಮಾತ್ ಅವನ ಉಸಿರಾಟ ಹೆಚ್ಚಿತು. ಆಟೊ ರಿಕ್ಷಾ ಇಷ್ಟು ವೇಗವಾಗಿ ಸಾಗುತ್ತಿದ್ದಾಗ್ಯೂ ಏರ್‌ಪೋರ್ಟನ್ನು ತಲುಪಿಲ್ಲ, ಅಲ್ಲದೆ ಏರ್‌ಪೋರ್ಟಿನ ಮಾರ್ಗ ತೋರಿಸುವ ವಿಮಾನದ ಚಿತ್ರವಿರುವ ನೀಲಿ ಬೋರ್ಡ್ ಮಾರ್ಗದ ಎಡಗಡೆ ಕಾಣಿಸುತ್ತಿರಲಿಲ್ಲ. ಹಾಂ, ಅವನಿಗೆ ರಸ್ತೆಯ ಈ ಗುರುತು ನೆನಪಿದೆ. ಅವನು ಮತ್ತೆ ಆಟೊ ರಿಕ್ಷಾದಲ್ಲಿದ್ದ ಕನ್ನಡಿಯಲ್ಲಿ ನೋಡಿದ. ಬೆಳಕು ಹೆಚ್ಚಾದ್ದರಿಂದಾಗಿ ಕನ್ನಡಿಯಲ್ಲಿ ಚಾಲಕನ ದೊಡ್ಡದೊಡ್ಡ ಮೀಸೆಗಳು ಮತ್ತು ಅವನ ಮುಖದ ಕಪ್ಪು ಬಣ್ಣ ಸ್ಪಷ್ಟವಾಗಿ ಕಾಣಿಸುತ್ತಿತ್ತು.

ಅಕಸ್ಮಾತ್ ಅವನಿಗೆ ಆಟೊ ರಿಕ್ಷಾದ ವೇಗ ಕಡಿಮೆಯಾಗುತ್ತಿದೆ ಎಂದು ಅನ್ನಿಸಿತು. ಆಟೊ ರಿಕ್ಷಾದ ವೇಗ ವಾಸ್ತವವಾಗಿಯೂ ಕಡಿಮೆಯಾಗಿತ್ತು; ಆಟೊ ರಿಕ್ಷಾ ರಸ್ತೆಯಲ್ಲಿ ಹೊರಳಿ ಮಣ್ಣಿನ ರಸ್ತೆಯಲ್ಲಿ ಹೋಗುತ್ತಿತ್ತು. ಅವನ ಮನಸ್ಸು ಕಳವಳಗೊಂಡಿತು. ಚಾಲಕ ನಿರ್ಜನ ರಸ್ತೆಯಲ್ಲಿ ಆಟೊ ರಿಕ್ಷಾವನ್ನು ನಿಲ್ಲಿಸುತ್ತಾನೆ, ಅವನು ಇಳಿದು ತನ್ನ ಬಳಿಗೆ ಬರುತ್ತಾನೆ, ದೇಶಿ ಪಿಸ್ತೂಲ್ ಅಥವಾ ಚಾಕುವನ್ನು ಹೊರ ತೆಗೆದು ತೋರಿಸಿ, ತನಗೆ ಗದರಿಸುತ್ತಾನೆ, ತನ್ನ ಬಳಿ ಇರುವುದನ್ನೆಲ್ಲಾ ಕೊಡಲು ಹೇಳುತ್ತಾನೆ, ಕೊಡದಿದ್ದರೆ ತನ್ನ ಹೆಣವೂ ಯಾರ ಕೈಗೆ ಸಿಗದಂತೆ ಮಾಡುತ್ತಾನೆ ಎಂದು ಅವನ ಮನಸ್ಸು ಅನುಮಾನಿಸಿತು. ಈ ಯೋಚನೆ ಬರುತ್ತಲೇ, ಪೊದೆಗಳಿಂದ ಪೊಲೀಸರು ಅವನ ಶವವನ್ನು ಹುಡುಕಿ ಹೊರ ತರುವ ದೃಶ್ಯ ಅವನ ಕಣ್ಣುಗಳೆದುರು ಮೂಡಿತು; ಅವನ ಇಡೀ ಶರೀರ ಕಂಪಿಸಿತು. ಅವನು ತನ್ನೆರಡೂ ಕೈಗಳ ಬೆರಳುಗಳನ್ನು ಪರಸ್ಪರ ಕೂಡಿಸಿ ತನ್ನ ಶರೀರದ ಕಂಪನವನ್ನು ತಡೆಯುವ ಪ್ರಯತ್ನ ಮಾಡಿದ. ಚಾಲಕ ಪಿಸ್ತೂಲ್ ಅಥವಾ ಚಾಕುವನ್ನು ಹೊರ ತೆಗೆದು ತನ್ನೆದುರು ಬಂದಾಗ ತಾನೇನು ಮಾಡುವುದೆಂದು ಅವನು ಯೋಚಿಸಲು ಆರಂಭಿಸಿದ.

ತನ್ನ ಪ್ಯಾಂಟಿನ ಜೇಬಿನಲ್ಲಿ ಈಗ ಮುನ್ನೂರು ನಾಲ್ಕುನೂರು ರೂಪಾಯಿಗಳು ಮಾತ್ರ ಇದೆ ಎಂದೂ ಅವನು ಯೋಚಿಸಿದ. ಅಕಸ್ಮಾತ್ ಅವನ ದೃಷ್ಟಿ ಅವನ ಕೈಯ ಮೇಲೆ ಬಿತ್ತು. ಅವನು ರೋಲ್ಡ್ ಗೋಲ್ಡ್ ಸ್ಟ್ರೆಪ್‌ನ ವಾಚನ್ನು ಧರಿಸಿದ್ದ. ಈ ವಾಚನ್ನು ಅವನ ನಾದಿನಿ ವಿದೇಶದಿಂದ ಕಳುಹಿಸಿದ್ದಳು. ಇವೆಲ್ಲವನ್ನು ಕೊಡುವುದರ ಬಗ್ಗೆ ಅವನಿಗೆ ವಿಶೇಷ ಚಿಂತೆ ಇಲ್ಲ. ಚಾಲಕ ಪಿಸ್ತೂಲ್ ಅಥವಾ ಚಾಕು ಹಿಡಿದು ತನ್ನೆದುರಿಗೆ ಬಂದರೆ, ತಾನು ತಕ್ಷಣ ಹಣವನ್ನು ಹೊರ ತೆಗೆದು ಅವನಿಗೆ ಕೊಟ್ಟು, ನನ್ನನ್ನು ಸಾಯಿಸಬೇಡ, ಏರ್‌ಪೋರ್ಟಿಗೆ ಬಿಡು ಎಂದು ಹೇಳುತ್ತೇನೆ ಎಂದು ಅವನು ಯೋಚಿಸಿದ. ಒಂದು ವೇಳೆ ತಾನು ಹಣವನ್ನು ಹೊರ ತೆಗೆಯಲು ಜೇಬಿಗೆ ಕೈ ಹಾಕಿದರೆ, ತಾನು ಆಯುಧವೊಂದನ್ನು ತೆಗೆಯುತ್ತಿದ್ದೇನೆಂದು ಚಾಲಕನಿಗೆ ಅನುಮಾನ ಬರುತ್ತದೆ, ಆಗ ಅವನು ತನ್ನನ್ನು ಶೂಟ್ ಮಾಡುತ್ತಾನೆ ಅಥವಾ ಚಾಕುವಿನಿಂದ ತನಗೆ ಇರಿಯುತ್ತಾನೆ, ಆಗ ತಾನೇನು ಮಾಡುವುದು ಎಂದೂ ಯೋಚಿಸಿದ. ಗುಂಡೇಟಿನಿಂದ ಅಥವಾ ಚಾಕು ಇರಿತದಿಂದ ತಾನು ಸಾಯದೆ ಇರಬಹುದು, ಆದರೆ ಗಾಯಾಳು ಆಗುವುದಂತೂ ನಿಶ್ಚಿತ. ಆ ಪರಿಸ್ಥಿತಿಯಲ್ಲಿ ಚಾಲಕ ತನ್ನನ್ನು ಲೂಟಿಗೈದು, ತನ್ನನ್ನು ಗಾಯಗೊಂಡ ಸ್ಥಿತಿಯಲ್ಲಿ, ರಸ್ತೆಯ ಅಂಚಿನಲ್ಲಿ ಎಸೆದು ಹೋಗುತ್ತಾನೆ. ತಾನು ಸಾಯುವುದರಿಂದ ಪಾರಾಗಬಹುದು, ಆದರೆ ತನ್ನ ವಿಮಾನ ಕೈ ತಪ್ಪುವುದು, ಮಂತ್ರಿಗಳು ಅಧ್ಯಕ್ಷತೆ ವಹಿಸುವ ಹಾಗೂ ತನ್ನ ಬಾಸ್ ವಿಶೇಷವಾಗಿ ಮೀಟಿಂಗಿನಲ್ಲಿ ಭಾಗವಹಿಸುವಂತೆ ತಿಳಿಸಿರುವ ಸಭೆಗೆ ತಾನು ಹೋಗಲು ಸಾಧ್ಯವಾಗದಿರಬಹುದು.

ಅವನ ಗಮನ ಮತ್ತೆ ರಿಕ್ಷಾದೆಡೆಗೆ ಹರಿಯಿತು. ರಿಕ್ಷಾ ರಸ್ತೆಯಿಂದ ಕೆಳಗಿಳಿದು ಮಣ್ಣಿನ ರಸ್ತೆಯಲ್ಲಿ ನಿಂತಿತ್ತು. ಚಾಲಕ ರಿಕ್ಷಾದೊಳಗೆ ಇರಲಿಲ್ಲ, ಅವನಿಗೆ ಆಶ್ಚರ್ಯವಾಯಿತು. ಅವನು ಅತ್ತಇತ್ತ ನೋಡಿದ. ಚಾಲಕ ಮಣ್ಣಿನ ರಸ್ತೆಯ ಕೊನೆಯಲ್ಲಿ ಬೆನ್ನು ಮಾಡಿ ನಿಂತಿದ್ದ. ಚಾಲಕ ವಾಸ್ತವವಾಗಿಯೂ ದೊಡ್ಡ ಚಾಕುವನ್ನು ಅಥವಾ ಒಳ ಜೇಬಿನಿಂದ ಪಿಸ್ತೂಲನ್ನು ಹೊರ ತೆಗೆಯುತ್ತಿದ್ದಾನೆ ಎಂದು